**ANDOLANA**

Date: Feb 02, 2016 Page: 04

Edition: Mysore Language: Kannada

# ಅಂತರ್ಜಾಲ ತಟಸ್ಥತೆ ಕುರಿತು ಸಂವಾದ

## ವಿಷಯ ತಜ್ಞರಿಂದ ಗೊಂದಲ ನಿವಾರಿಸುವ ಪ್ರಯತ್ನ




**ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸಂಸ್ಥೆಯಲ್ಲಿ ಆಯೋಜಿಸಿದ್ದ 'ಅಂತರ್ಜಾಲದ ತಟಸ್ಥತೆ ಹಾಗೂ ಉಚಿತ ಮೂಲಭೂತ ತತ್ವಗಳು' ವಿಷಯ ಕುರಿತ ಸಂವಾದದಲ್ಲಿ ಡಾ.ಶಾಲಿನಿ ಆರ್.ಅರಸ್ ಮಾತನಾಡುತ್ತಿರುವುದು. ಡಾ. ಸುಧೀರ್ ಸೋಸಲೆ, ಎನ್. ವಿ. ಸತ್ಯನಾರಾಯಣ, ಕಲ್ಪೇಶ್ ಮೆಹ್ತಾ ಚಿತ್ರದಲ್ಲಿದ್ದಾರೆ.**

ಮೈಸೂರು,ಫೆ.೧– 'ಅಂತರ್ಜಾಲದ ತಟಸ್ಥತೆ ಹಾಗೂ ಉಚಿತ ಮೂಲಭೂತ ತತ್ವಗಳು' ವಿಷಯದ ಬಗೆಗೆ ಜನರಲ್ಲಿರುವ ಗೊಂದಲವನ್ನು ನಿವಾರಿಸಲು ನಗರದಲ್ಲಿ ಸೋಮವಾರ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಮೈಸೂರು ವಿಶ್ವವಿದ್ಯಾನಿಲಯದ ಇನ್‌ಫರ್ಮೇಷನ್ ಅಂಡ್ ಲೈಬ್ರರಿ ಸೈನ್ಸ್ ಅಲುಮ್ನಿನೆಟ್‌ವರ್ಕ್ ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ (ಎಸ್‌ಡಿಎಂಐಎಂಡಿ) ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಸೋಮವಾರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂಐಎಂಡಿ ಸಂಸ್ಥೆಯಲ್ಲಿ ನಡೆದ ಸಂವಾದದಲ್ಲಿ ವಿಷಯ ತಜ್ಞರು ಗೊಂದಲಗಳನ್ನು ನಿವಾರಿಸುವ ಪ್ರಯತ್ನ ಮಾಡಿದರು.

ಗ್ರಾಹಕರು ಅಂತರ್ಜಾಲ ಪುಟಗಳನ್ನು ಪ್ರವೇಶಿಸಲು ಬೇರೆ ಬೇರೆ ಶುಲ್ಕಗಳನ್ನು ನಿಗದಿಪಡಿಸಿರುವುದನ್ನು ಅಂತರ್ಜಾಲದ ತಟಸ್ಥತೆ ಎನ್ನಲಾಗುತ್ತದೆ. ಇದನ್ನು ಅಂತರ್ಜಾಲ ತಟಸ್ಥ ಕಾರ್ಯಕರ್ತರು ವಿರೋಧಿಸುತ್ತಿದ್ದಾರೆ. ಫೇಸ್‌ಬುಕ್‌ನ ಹೊಸ ಅವತಾರವಾಗಿ ಫ್ರೀ ಬೇಸಿಕ್ಸ್ ಬಂದಿದೆ. ಇದನ್ನು ಕುರಿತಾದ, ವಿವಾದಗಳು ಚರ್ಚೆಯಾಗುತ್ತಿವೆ. ಟೆಲಿಕಾಂ ಅಥಾರಿಟಿ ಆಫ್ ಇಂಡಿಯಾ ಭಾರತ ದೇಶದ ನೀತಿ ನಿರೂಪಣೆಯ ವಿಷಯದಲ್ಲಿ ಫ್ರೀ ಬೇಸಿಕ್ಸ್ ಅಪಾಯಕಾರಿಯಾಗಲಿದೆ ಎಂದು ತನ್ನ ಅಭಿಪ್ರಾಯ ಮಂಡಿಸಿದೆ. ಈ ಸನ್ನಿವೇಶದಲ್ಲಿ, ಅಂತರ್ಜಾಲವನ್ನು ಉಪಯೋಗಿಸುವವರು ಮೇಲಿನ ವಿಷಯದ ಬಗ್ಗೆ ಗೊಂದಲದಲ್ಲಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಎಸ್‌ಡಿಎಂಐಎಂಡಿ ಕಾಲೇಜಿನ ಸ್ನಾತಕೋತ್ತರ ಡಿಪ್ಲೊಮೊ ನಿರ್ವಹಣೆ ವಿಭಾಗದ ಮುಖ್ಯಸ್ಥೆ ಪ್ರೊ.ಮಾಲತಿ ಶ್ರೀರಾಮ್ ಸಂವಾದ ನಡೆಸಿಕೊಟ್ಟರು. ಇನ್ಫರ್ಮಾಟಿಕ್ಸ್ ಇಂಡಿಯಾ ಲಿಮಿಟೆಡ್‌ನ ಅಧ್ಯಕ್ಷ ಎನ್.ವಿ.ಸತ್ಯನಾರಾಯಣ, ಮೈಸೂರು ವಿಶ್ವವಿದ್ಯಾನಿಲಯದ ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಇನ್‌ಫರ್ಮೇಷನ್ ಮ್ಯಾನೇಜ್‌ಮೆಂಟ್‌ನ ಕಾರ್ಯನಿರ್ವಾಹಕ ನಿರ್ದೇಶಕಿ ಡಾ.ಶಾಲಿನಿ ಆರ್.ಅರಸ್, ಎನ್‌ಐಇ ಕಾಲೇಜಿನ ಸೆಂಟರ್ ಫಾರ್ ಟ್ರೈನಿಂಗ್ ಇನ್ ಅಡ್ವಾನ್ಸ್ಡ್ ಟೆಕ್ನಾಲಜೀಸ್ ವಿಭಾಗದ ನಿರ್ದೇಶಕ ಡಾ. ಸುಧೀರ್ ಸೋಸಲೆ, ಸ್ಟಾರ್ ಸಾಫ್ಟ್-ಇಂಡಿಯಾದ ಸ್ಥಾಪಕ ಕಲ್ಪೇಶ್ ಮೆಹ್ತಾ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಚಾರ ಮಂಡಿಸಿದರು.

Panel Discussion on 'Net Neutrality Vs Free Basics'